**ದಿ: 14-08-2025 ರಂದು ಸಾಕ್ಷಿ ಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರಿದ ಪಾಟೀಸವಾಲು: ಶ್ರೀ ಎ ಟಿ ಬಿ ವಕೀಲರಿಂದ: -**

1. ನಿಮ್ಮ ಸಾಕ್ಷಿ ಪ್ರಮಾಣ ಪತ್ರದ ಪ್ಯಾರಾ ನಂ 4 ರಲ್ಲಿ ಜಂಪಯ್ಯ ತಂದೆ ಅಮಾತೆಪ್ಪ ನಿಮ್ಮ ಪೂರ್ವಜರು ಎಂದು ಬರೆಸಿದ್ದಿರಿ ಎಂದರೆ ಸರಿ. ಸಾಕ್ಷಿ ಮುಂದುವರಿದು ನನ್ನ ಅತ್ತೆ ಕುಟುಂಬಕ್ಕೆ ಸಂಬಂಧಪಟ್ಟವರಾಗಿರುತ್ತಾರೆ ನಾಗರಾಜನ ಕುಟುಂಬಕ್ಕೆ ಸಂಬಂಧಪಟ್ಟವರಾಗಿರುತ್ತಾರೆ ಎನ್ನುತ್ತಾರೆ. ಜಂಪಯ್ಯ ತಂದೆ ಅಮಾತೆಪ್ಪ ನಿಮ್ಮ ಕುಟುಂಬಕ್ಕೆ ಸಂಬಂದಪಡದೇ ಇದ್ದರೂ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ. ನನ್ನ ಲಗ್ನವಾದಾಗ ನನಗೆ ಎಷ್ಟು ವಯಸ್ಸು ಇತ್ತು ಅಂತಾ ಗೊತ್ತಿಲ್ಲ. ಗಂಗಮ್ಮ ರವರಿಗೆ ಮದುಯಾದಾಗ ಅವರಿಗೆ ವಯಸ್ಸು ಎಷ್ಟು ಇತ್ತು ಎಂದರೆ ಸಾಕ್ಷಿಯು ನಾನು ಚಿಕ್ಕವಳಿದ್ದೆ ಎಷ್ಟು ವಯಸ್ಸು ಇತ್ತು ಎಂದು ಗೊತ್ತಿಲ್ಲ ಎನ್ನುತ್ತಾರೆ. ಗಂಗಮ್ಮ ಹೊನ್ನಯ್ಯನ ಮೊದಲನೇ ಹೆಂಡತಿ ಮಲ್ಲಮ್ಮ 2ನೇ ಹೆಂಡತಿ ಎಂದು ವಿಷಯ ಯಾರು ಹೇಳಿದರು ಎಂದರೆ ಸಾಕ್ಷಿಯು ನಾನು ಅದೇ ಊರಿನವಳು ಇರುವುದರಿಂದ ನನಗೆ ಗೊತ್ತಿದೆ ಎನ್ನುತ್ತಾರೆ. ನಾನು ಸುಮಾರು 40 ವರ್ಷಗಳಿಂದ ಗಂಡನ ಮನೆಯಲ್ಲಿರುತ್ತೇನೆ ತವರು ಮನೆಗೆ ಬರುತ್ತೇನೆ ಮತ್ತು ಹೋಗುತ್ತೇನೆ ಎನ್ನುತ್ತಾರೆ. ನನ್ನ ಸಾಕ್ಷಿ ಪ್ರಮಾಣ ಪತ್ರದ ಪ್ಯಾರಾ ನಂಬರ್ 5 ರ ದಾವಾ ಆಸ್ತಿಗಳು ನಿಮ್ಮ ತಂದೆ ಹೊನ್ನಯ್ಯ ಮತ್ತು ಅವರ ಸಹೋದರ ಜಂಪಯ್ಯ ಇವರಿಗೆ ಸೇರಿದ್ದು ಎಂದು ಬರೆಸಿದ್ದೀರಾ ಎಂದರೆ ಹೌದು ಬರೆಸಿದ್ದೇನೆ ಎನ್ನುತ್ತಾರೆ. ದಾವಾ ಆಸ್ತಿಗಳು ಮೊದಲು ಜಂಪಯ್ಯನ ಹೆಸರಲೇ ಇದ್ದವು. ಜಂಪಯ್ಯನಿಗೆ ಸದರಿ ಆಸ್ತಿಗಳು ಹೇಗೆ ಬಂದಿರುತ್ತವೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಹೊನ್ನಯ್ಯ ಯಾವಾಗ ಹುಟ್ಟಿದ್ದಾನೆ ಮತ್ತು ಆತನ ವಿದ್ಯಾಭ್ಯಾಸದ ಬಗ್ಗೆ ನನಗೆ ಮಾಹಿತಿ ಇಲ್ಲ. ಹೊನ್ನಯ್ಯ ಪೋಲಿಸ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದ ಎಂದು ಹೇಳಿ ಬರೆಸಿದ್ದೀರಿ ಎಂದರೆ ಸಾಕ್ಷಿಯು ನಾನು ಚಿಕ್ಕವಳಿದ್ದೇ ಎನ್ನುತ್ತಾರೆ. ಹೊನ್ನಯ್ಯ

ಯಾವ ತಾರೀಖು ತಿಂಗಳದಂದು ತೀರಿಕೊಂಡಿದ್ದಾನೆಂದು ನನಗೆ ಗೊತ್ತಿಲ್ಲ. ಸ ನಂ 80 ರಲ್ಲಿ ಒಟ್ಟು ಎಷ್ಟು ಎಕರೆ ಜಮೀನು ಇದೆ ಎಂದರೆ ಸಾಕ್ಷಿಯು 8-00 ಎಕರೆ ಇದೆ ಎನ್ನುತ್ತಾರೆ. ಅದರಲ್ಲಿ ಎಷ್ಟು ಹಿಸ್ಸಾಗಳು ಮತ್ತು ಪಹಣಿಗಳು ಆಗಿವೆ ಎಂದು ನನಗೆ ಗೊತ್ತಿಲ್ಲ. ಈ ಆಸ್ತಿಗಳಲ್ಲಿ ಯಾರು ಯಾರಿಗೆ ಯಾವಾಗ ಪಹಣಿಗಳು ಆಗಿವೆ ಎಂದು ನನಗೆ ಮಾಹಿತಿ ಇಲ್ಲ. ದಾವಾ ಆಸ್ತಿಗಳ ಬಗ್ಗೆ ನಿಮಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ವಾದಿಯನ್ನು ನಿಮ್ಮ ತಾಯಿ ದತ್ತಕ ತೆಗೆದುಕೊಂಡಿರುವುದರಿಂದ ನಿಮ್ಮ ಜೊತೆಗೆ ಸಮಭಾಗ ಆಸ್ತಿಯನ್ನು ಪಡೆದುಕೊಂಡಿದ್ದಾನೆಂದರೆ ಸರಿಯಲ್ಲ. ದಾವಾ ಆಸ್ತಿಯ ಬಗ್ಗೆ ನಿಮಗೆ ಏನೂ ಮಾಹಿತಿ ಇಲ್ಲ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ. ವಾದಿಗೆ ದಾವಾ ಆಸ್ತಿಯಲ್ಲಿ ಯಾವುದೇ ಭಾಗ ಬರಬೇಕಾಗಿಲ್ಲ ಎಂದು ನಿಮಗೆ ಗೊತ್ತಿದ್ದರೂ ಸುಳ್ಳು ಸಾಕ್ಷಿ ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ದಾವಾ ಹೊಲ ಮನೆ ಪ್ಲಾಟುಗಳು ಖರೀದಿ ಮಾಡಿದ ಆಸ್ತಿಗಳು ಆಗಿದ್ದು ಪಿತ್ರಾರ್ಜಿತ ಆಸ್ತಿಗಳು ಆಗಿರುತ್ತವೆ ಎಂದರೆ ಸರಿಯಲ್ಲ. ನಿಮ್ಮ ಮುಖ್ಯ ವಿಚಾರಣೆಯಲ್ಲಿ ಹೇಳಿದ ಎಲ್ಲಾ ವಿಷಯಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ.

(ಸಾಕ್ಷಿಯು ನೀಡಿರುವ ಸಾಕ್ಷವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

**ಓ.ಹೇ.ಕೇ.ಸರಿ ಇದೆ.**
ಸಹಿ/–

ಸಿವಿಲ್ ಜಡ್ಜ್ & ಜೆ.ಎಂ.ಎಫ್.ಸಿ.

ದೇವದುರ್ಗ